†ಶ್ರೀ ಎನ್. ಚಿಕ್ಕೇಗೌಡ.—1956ರಿಂದ ಆಗಿಲ್ಲ ಎಂದು ಉತ್ತರದಲ್ಲಿ ಹೇಳಲಾಗಿದೆ. ಆದರೂ ಅಲ್ಲಿಂದ ಇಲ್ಲಿಯವರೆಗೆ 287 ಪೊಸ್ಟ್‌ಗಳನ್ನು ಅಪ್-ಗ್ರೇಡ್ ಮಾಡಿದ್ದೇವೆ. 65 ಫೋಸ್ಟ್‌ಗಳನ್ನು ಎರಡನೇ ಗ್ರೇಡಿನಿಂದ ಒಂದನೇ ಗ್ರೇಡಿಗೆ ರೂ. 160 350ರ ಸ್ಕೇಲ್‌ನಲ್ಲಿ ಮಾಡಿದ್ದೇವೆ. ಇನ್ನೂ ಕೆಲವು ಕೇಸುಗಳನ್ನು ಸರ್ಕಾರದವರು ಕನ್ಸಿಡರ್ ಮಾಡುತ್ತಿದ್ದಾರೆ. ಸೀನಿಯಾರಿಟಿಯಲ್ಲಿ ಕೆಲವು ಡಿಸ್ಪ್ಯೂಟೆಡ್ ಇರುವುದರಿಂದ ತೀರ್ಮಾನ ತೆಗೆದುಕೊಳ್ಳಲು ತಡವಾಗಿದೆ.

ಶ್ರೀ ಎಸ್. ಎಂ. ಶಿರನಾಳ ಚಂದ್ರಶೇಖರ್.—ಲಿಸ್ಟನ್ನು ಅಂತಿಮಗೊಳಿಸಲು ಏನೇನು ತೊಂದರೆಗಳು ಬಂದಿವೆ ?

ಶ್ರೀ ಎನ್. ಚಿಕ್ಕೇಗೌಡ.—ಸೀನಿಯಾರಿಟಿ ವಿಚಾರದಲ್ಲಿ ಕೆಲವು ತೊಂದರೆಗಳಿರುವುದು ಏನಿದೆ ಅದನ್ನು ವಿಚಾರ ಮಾಡಬೇಕಾಗಿದೆ.

ಶ್ರೀ ಸಿ. ಬೈರೇಗೌಡ.—ಸೀನಿಯಾರಿಟಿಯನ್ನು ಅಂತಿಮಗೊಳಿಸಲು ಪ್ರತಿಯೊಂದು ಇಲಾಖೆಯಲ್ಲಿಯೂ ಒಬ್ಬರನ್ನು ಐ. ಎ. ಎಸ್. ಆಫೀಸರನ್ನು ನೇಮಕ ಮಾಡುತ್ತೀರಾ ?

ಶ್ರೀ ಎನ್. ಚಿಕ್ಕೇಗೌಡ.—ಸೀನಿಯಾರಿಟಿಯನ್ನು ಪರಿಶೀಲಿಸಲು ಆಯಾ ಇಲಾಖೆಯಲ್ಲಿಯೇ ಐ. ಎ ಎಸ್. ದರ್ಜೆಯ ಅಧಿಕಾರಿಗಳು ಇದ್ದಾರೆ. ಸೆಕ್ರೆಟೇರಿಯಟ್ ಮಟ್ಟದಲ್ಲಿಯೂ ಸಹ ಸೆಕ್ರೆಟರಿ ಪೋಸ್ಟನ್ನು ಕಮೀಷನರ್ ಗ್ರೇಡ್‌ಗೆ ಹೆಚ್ಚು ಮಾಡಲಾಗಿದೆ. ಇವರು ಪರಿಶೀಲಿಸಿದ ನಂತರ ಸರ್ಕಾರದವರು ಅಂತಿಮ ತೀರ್ಮಾನ ಕೈಕೊಳ್ಳುವರು.

ಶ್ರೀ ಎಂ. ಮಲ್ಲಪ್ಪ.—ಯಾರಿಗಾದರೂ ಸೀನಿಯಾರಿಟಿಯಲ್ಲಿ ಅನ್ಯಾಯವಾದರೆ ಅಂತಹವರು ಕೋರ್ಟಿಗೆ ಹೋಗುವ ಬದಲು ಟ್ರಿಬ್ಯುನಲ್ ನೇಮಕ ಮಾಡಿ ಅದರ ಮೂಲಕ ತೀರ್ಮಾನ ಮಾಡುವುದಕ್ಕೆ ಕ್ರಮ ಕೈಕೊಳ್ಳುತ್ತೀರಾ ?

ಶ್ರೀ ಎನ್. ಚಿಕ್ಕೇಗೌಡ.—ಕೆಲವು ದರ್ಜೆಗಳನ್ನು ಕೇಂದ್ರ ಸರ್ಕಾರದವರು ಮತ್ತು ರಾಜ್ಯ ಸರ್ಕಾರದವರು ಪರಿಶೀಲಿಸಿದ ನಂತರ ತೀರ್ಮಾನ ತೆಗೆದುಕೊಳ್ಳಬೇಕಾಗುತ್ತದೆ. ಮತ್ತೆ ಕೆಲವು ದರ್ಜೆಗಳನ್ನು ರಾಜ್ಯ ಸರ್ಕಾರದವರೇ ತೀರ್ಮಾನ ಮಾಡುತ್ತಾರೆ. ಈ ರೀತಿ ತೀರ್ಮಾನವಾದ ಮೇಲೆ ಕೂಡ ಏನಾದರು ಅನ್ಯಾಯವಾಗಿದ್ದರೆ ರಾಜ್ಯಾಂಗದಲ್ಲಿರುವ ಹಕ್ಕಿನ ಪ್ರಕಾರ ಅನ್ಯಾಯವಾದವರು ಕೋರ್ಟಿಗೆ ಹೋಗುತ್ತಾರೆ. ಅದು ಕೋರ್ಟಿನಲ್ಲಿ ಸಾಬೀತಾದರೆ ಕೋರ್ಟ್ ಏನು ತೀರ್ಮಾನ ಕೊಡುತ್ತದೋ ಅದಕ್ಕೆ ನಾವು ಬದ್ಧರಾಗುತ್ತೇವೆ.

Sri S. M. YAHYA.—How many writ petitions pertaining to this seniority are pending in the High Court ?

Sri N. CHIKKE GOWDA. If the hon. Member puts a separate question I will furnish the information

ಶ್ರೀ ಎಸ್. ಎಂ. ಶಿರನಾಳ ಚಂದ್ರಶೇಖರ್.—ಸೀನಿಯಾರಿಟಿ ಪಟ್ಟಿಯನ್ನು ತಯಾರು ಮಾಡುವಾಗ ಕೇವಲ ಸರ್ವಿಸನ್ನು ಗಮನಕ್ಕೆ ತೆಗೆದುಕೊಳ್ಳುತ್ತೀರೋ ಅಥವಾ ಮೆರಿಟ್ಸ್ ಮೇಲೆ ಮಾಡುತ್ತೀರೋ ?

ಶ್ರೀ ಎನ್. ಚಿಕ್ಕೇಗೌಡ.—ಸರ್ವಿಸನ್ನು ಪರಿಗಣನೆಗೆ ತೆಗೆದುಕೊಳ್ಳುವುದರ ಜೊತೆಗೆ ಕಾನ್ಫಿಡೆನ್ಷಿಯಲ್ ರಿಪೋರ್ಟನ್ನು ಸಹ ಪರಿಗಣನೆಗೆ ತೆಗೆದುಕೊಳ್ಳುತ್ತೇವೆ.

Unauthorised Occupation of Gomal Land in Gubbi Taluk

55. Sri GATTI CHANDRASEKHAR (Gubbi).—

Will the Minister for Revenue be pleased to state :—

(*a*) whether it has come to the notice of the Government that the Ryots in each and every village of Gubbi Taluk have occupied the Gomal lands unauthorisedly ;

(*b*) if so, the definite policy of the Government in this behalf ?

† Indicates that the remarks or speechs have not been revised by the membe. concerned.

Sri N. HUTCHAMASTHY GOWDA (Minister for Revenue).—

(*a*) This has come to the notice of the Deputy Commissioner Tumkur District.

(*b*) (1) To evict the encroachers from Gomal lands.

(2) To take steps to regularise the Gomal lands if it is in excess and is under occupation before 1st July 1968 in accordance with the rules regarding the regularisation of lands, which are under unauthorised occupation.

ಶ್ರೀ ಗಟ್ಟಿ ಚಂದ್ರಶೇಖರ್.—ಎಷ್ಟೇ ಪ್ರಶ್ನೆಗೆ ಉತ್ತರವಾಗಿ ಗೋಮಾಳವೇನಾದರೂ ಹೆಚ್ಚಾಗಿದ್ದರೆ ನಿಯಮಗಳ ಪ್ರಕಾರ ಕಾರ್ಯಕ್ರಮಗಳನ್ನು ಕೈಗೊಳ್ಳಲಾಗುವುದು ಎಂದು ಹೇಳಿದ್ದೀರಿ ಗೋಮಾಳ ಕಡಿಮೆ ಇದ್ದ ಕಡೆ ಕೂಡ ಅಕ್ರಮವಾಗಿ ಸಾಗುವಳಿ ಮಾಡಿದವರಿಗೆ 3—4 ವರ್ಷದ ಟಿ. ಟಿ. ಹಾಕುವುದರ ಮೂಲಕ ಅವರ ಹೆಸರಿಗೆ ಜಮೀನನ್ನು ಮಾಡಿದ್ದಾರೆ, ಅದರ ಬಗ್ಗೆ ಏನು ಕ್ರಮ ತೆಗೆದುಕೊಳ್ಳುತ್ತೀರಾ ?

†ಶ್ರೀ ಎನ್. ಹುಚ್ಚಮಾಸ್ತಿಗೌಡ.—ರೂಲ್ಸ್‌ನಲ್ಲಿ ಸ್ಪಷ್ಟವಾಗಿ ಹೇಳಿದೆ. 100 ರಾಸುಗಳಿಗೆ 30 ಎಕರೆ ಗೋಮಾಳ ಇರಬೇಕೆಂದು. ಅದಕ್ಕಿಂತ ಕಡಿಮೆ ಇದ್ದು ಅತಿಕ್ರಮವಾಗಿ ಸ್ವಾಧೀನಪಡಿಸಿಕೊಂಡಿದ್ದರೆ ಅಂತಹವರ ವಿರುದ್ಧ ರೂಲ್ಸ್ ಪ್ರಕಾರ ಕ್ರಮ ತೆಗೆದುಕೊಳ್ಳಲಾಗುತ್ತದೆ.

ಶ್ರೀ ಗಟ್ಟಿ ಚಂದ್ರಶೇಖರ್.—ಈ ರೂಲ್ಸ್ ವೆಶಲಿನಿಂದಲೂ ಇದೆ. ಆದರೆ ಇದನ್ನು ಜಾರಿಗೆ ಕೊಟ್ಟಿಲ್ಲ. ಈಗಲಾದರೂ ರೂಲ್ಸ್ ಪ್ರಕಾರ ಅಕ್ರಮವಾಗಿ ಸ್ವಾಧೀನಪಡಿಸಿಕೊಂಡಿದ್ದರೆ ಕ್ರಮ ತೆಗೆದುಕೊಳ್ಳುತ್ತೀರಾ ?

ಶ್ರೀ ಎನ್. ಹುಚ್ಚಮಾಸ್ತಿಗೌಡ.—ಗೋಮಾಳ ಕಡಿಮೆ ಇರುವ ಕಡೆ ಅಕ್ರಮವಾಗಿ ಸ್ವಾಧೀನ ಪಡಿಸಿಕೊಂಡಿದ್ದರೆ ಅಂತಹ ಕಡೆ ಅವರನ್ನು ಬಿಡಿಸುವುದಕ್ಕೆ ಏರ್ಪಾಡು ಮಾಡುತ್ತೇವೆ.

ಶ್ರೀ ಎಂ. ಎನ್. ಕೃಷ್ಣನ್,— 100 ರಾಸುಗಳಿಗೆ 30 ಎಕರೆ ಜಮೀನು ಗೋಮಾಳಕ್ಕಾಗಿ ಇರಬೇಕೆಂಬ ನಿಯಮ ಮಾಡಿದ್ದು ಬಹಳ ಹಿಂದೆ. ಅದನ್ನು ಈಗಿನ ಕಾಲಕ್ಕೆ ತಕ್ಕ ಹಾಗೆ ವಾಸ್ತವಾಂಶಗಳನ್ನು ಪರಿಶೀಲಿಸಿ ಬದಲಾವಣೆ ಮಾಡುತ್ತೀರಾ ?

ಶ್ರೀ ಎನ್. ಹುಚ್ಚಮಾಸ್ತಿಗೌಡ — ಮಾನ್ಯ ಸಭೆ ಏನಾದರು ಗೋಮಾಳವನ್ನು ಪೂರಾ ತೆಗೆದುಹಾಕಿ ವ್ಯವಸಾಯಕ್ಕೆ ಕೊಡಬೇಕೆಂದು ಅಭಿಪ್ರಾಯ ಪಟ್ಟರೆ ಈಗಿನ ರೂಲ್ಸ್‌ನ್ನು ಬದಲಾವಣೆ ಮಾಡಬಹುದು. ಅಲ್ಲಿಯವರೆಗೆ ಈಗಿರುವ ರೂಲ್ಸ್‌ನ್ನು ಬದಲಾವಣೆ ಮಾಡುವ ಅವಶ್ಯಕತೆ ಇಲ್ಲ.

ಶ್ರೀ ಎಂ. ಎಚ್. ಜಯಪ್ರಕಾಶ್ ನಾರಾಯಣ.— ಗುಬ್ಬಿ ತಾಲ್ಲೂಕಿನಲ್ಲಿ ಹೆಚ್ಚಿನ ಜಮೀನು ಇರುವವರೇ ಈ ಗೋಮಾಳಗಳನ್ನು ಅಕ್ರಮವಾಗಿ ಸಾಗುವಳಿ ಮಾಡುತ್ತಿರುವುದರಿಂದ, ಅದನ್ನು ರದ್ದು ಮಾಡುತ್ತೀರಾ ?

ಶ್ರೀ ಎನ್. ಹುಚ್ಚಮಾಸ್ತಿಗೌಡ.—ರದ್ದು ಮಾಡತಕ್ಕಂಥ ಏರ್ಪಾಡನ್ನು ಖಂಡಿತ ಮಾಡುತ್ತೇವೆ.

ಶ್ರೀ ಎಚ್. ಎಸ್. ಸಿದ್ದಪ್ಪ.—ಕೆಲವು ಕಡೆ ಇರುವ ಗೋಮಾಳಗಳಲ್ಲಿ ಕಲ್ಲು ಬಂಡೆಗಳು ಇವೆ. ಅಂತಹ ಕಡೆಗಳಲ್ಲಿ ಉತ್ತಮವಾದ ಜಮೀನನ್ನು ಗೋಮಾಳಕ್ಕಾಗಿ ಬಿಡುವುದಕ್ಕೆ ಏರ್ಪಾಡು ಮಾಡುತ್ತೀರಾ ?

ಶ್ರೀ ಎನ್. ಹುಚ್ಚಮಾಸ್ತಿಗೌಡ.—ಈಗಿರುವ ಗೋಮಾಳದ ಜಮೀನನ್ನು ಅಕ್ರಮವಾಗಿ ಸಾಗುವಳಿ ಮಾಡುತ್ತಿರುವಾಗ, ಉತ್ತಮವಾಗಿರುವ ಜಮೀನನ್ನು ಅದಕ್ಕಾಗಿ ಬಿಡುಗಡೆ ಮಾಡುವ ವಿಷಯ ಸಧ್ಯಕ್ಕೆ ಇಲ್ಲ.

ಶ್ರೀ ಕೆ. ಆರ್. ಶ್ರೀನಿವಾಸುಲು ನಾಯ್ಡು.—ಈಗ ಬಡವರಿಗೆ ಜಮೀನು ಹಂಚುವುದಕ್ಕೆ ಹೊರಟಿದ್ದೇವೆ. ಈಗ ಜಾನುವಾರುಗಳು ಜಾಸ್ತಿಯಾಗಿ ಗೋಮಾಳ ಕಡಿಮೆಯಾಗುತ್ತಿದೆ. ಈ ಕಾರಣದಿಂದ ಜಾನುವಾರುಗಳಿಗೆ ಬೇಕಾದ ಮೇವನ್ನು ಒದಗಿಸುವುದಕ್ಕೆ ಯಾವ ಕಾರ್ಯಕ್ರಮ ಹಾಕಿಕೊಂಡಿದ್ದೀರೀ ?

ಶ್ರೀ ಎನ್. ಹುಚ್ಚಮಾಸ್ತಿಗೌಡ.—ಇರತಕ್ಕಂಥ ಗೋಮಾಳದಲ್ಲಿಯೇ ದನಗಳನ್ನು ಮೇಯಿಸುವುದಕ್ಕೆ ಈಗ ಏರ್ಪಾಡು ಮಾಡಿದೆ. ಇನ್ನು ಮುಂದೆ ಆವರವರ ಜಮೀನಿನಲ್ಲಿಯೇ ಈಲ್ಲನ್ನು ಬೆಳೆದು ದನಗಳನ್ನು ಸಾಕಿ ರಾಭ ಮಾಡಿಕೊಳ್ಳುವ ಏರ್ಪಾಡು ಮಾಡಿಕೊಳ್ಳಬೇಕು. ಹಗ ಇರತಕ್ಕಂಥ ಪರಿಸ್ಥಿತಿಯಲ್ಲಿ ನೂರು ದನಗಳಿಗೆ 20 ಎಕರೆಗಳಲ್ಲ, ನೂರು ಎಕರೆಗಳನ್ನು ಗೋಮಾಳಕ್ಕಾಗಿ ಬಿಟ್ಟರೂ ಸಹ ಅವುಗಳ ಮೇವಿಗೆ ಸಾಕಾಗುವುದಿಲ್ಲವೆಂಬುದು ಕಣ್ಣಿಗೆ ಕಾಣುತ್ತಿದೆ.

ಶ್ರೀ ಎ. ವಿ. ಮುನಿಸ್ವಾಮಿ. ನೂರು ದನಗಳಿಗೆ ನೂರು ಎಕರೆ ಜಮೀನನ್ನು ಬಿಟ್ಟರೂ ಸಹ ಮೇವಿಗೆ ಸಾಕಾಗುವುದಿಲ್ಲವೆಂದು ಹೇಳುವುದಾದರೆ, ಈಗಿರತಕ್ಕಂಥ ಗೋವಾಳದ ಜಮೀನನ್ನು ಜಮೀನು ಇಲ್ಲದವರಿಗೆ ಏತಕ್ಕೆ ಹಂಚಿಕೆ ಮಾಡಬಾರದು ?

ಶ್ರೀ ಎನ್. ಹುಚ್ಚಮಾಸ್ತಿಗೌಡ.—ಈ ಸಭೆಯವರು ಆ ರೀತಿ ಅಭಿಪ್ರಾಯ ಕೊಟ್ಟರೆ ಅದನ್ನು ಸಹ ಹಂಚುವ ವ್ಯವಸ್ಥೆ ಮಾಡಬಹುದು.

ELECTION FOR NIPANI MUNICIPALITY

114. **Sri B B SAYANAK** (Belgaum).—

Will the Minister for Municipal Administration be pleased to state:-

(*a*) the date on which the Nipani Municipality was superseded ;

(*b*) the reasons for not holding elections to the Nipani Municipality during the last six years ;

(*c*) when the Government intend to hold elections to the Nipani Municipality ?

Sri B. BASAVALINGAPPA (Minister for Municipal Administration).-

(*a*) The Municipality has not been superseded.

(*b*) The process of election was interrupted by filing writ petitions and obtaining orders of stay from the High Court. Finally the High Court quashed the Government Notification reconstituting the territorial divisions in Decemder 1968.

(*c*) As soon as it is found feasible.

Sri B. B. SAYANAK.—In answer to (a) it is stated that the Nipani Municipality has not been superseded. May I know whether the Nipani Municipality is run by an Administrator or by the elected representative ?

Sri B. BASAVALINGAPPA.—Now, it is manned by the Administrator.

Sri B. B. SAYANAK.—May I know when the Administrator was appointed ?

Sri B. BASAVALINGAPPA.—Elections were held on 19.1.1964. Some persons, who were aggrieved by the elections went in writ Petition No.2608/63 before the High Court and it dragged on. Again we tried to hold elections on 7.3.1965. Then some other people went